ಫಾರೆಸ್ಟ್ ಇಲಾಖಾ.

ಇ ಸ್ತಿ ಹಾ ರ್ ನಾ ಮೆ.

ತಾರೀಖು 6ನೇ ಜನವರೀ 1887.

ಇದರಿಂದ ಪ್ರಕಟಪಡಿಸುವದೇನಂದರೆ, ಹಾಸನ ಡಿಸ್ಟ್ರಿಕ್ಟ್ ಉತ್ಪತ್ತೀ ಬಾಬತು ಇದರಡೀ ಕಂಡ ನಾಟಾಗಳು, ಹಾಸನದ ಡಿಪೋದಲ್ಲಿ ಡೆಪ್ಯುಟಿ ಕಮ್ಮಿಷನರ್ ಮತ್ತು ಫಾರೆಸ್ಟ್ ಆಫೀಸರವರಿಂದ 1887ನೇ ಇಸವಿ ಫಿಬ್ರವರೀ 3ನೇ ಮಧ್ಯಾಹ್ನ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

ನಾಟಾದ ತಪಶೀಲು.	ನಾಟಾಗಳ ಸಂಖ್ಯೆ.	
ಕೂವೆ (ಪೂರ್) ..	49	
ನಂದಿ ..	151	
ಹೆಸವಾ (ಕಾಡಪಲಸು) ..	34	
ಮತ್ತಿ ..	17	
ಕರೀಮರ ..	1	
ಮೆಳಲಿ (ಯಬೊನಿ) ..	6	
ಕಾಡುಮರ ..	62	
ಜುಮ್ಲಾ	320	ಸ್ವಲ್ಪ ಹೆಚ್ಚುಕಡಿಮೆ.

ಹರಾಜಿನ ಷರತ್ತುಗಳು—1873ನೇ ಇಸವಿ ಜೂನ್ 12ನೇ ಮತ್ತು 20ನೇ ನಂಬರ್ ಮೈಸೂರು ಗೆಜೆಟ್ಟುನಲ್ಲಿ ಘಾಯಿಷ್ಮಾಡಲ್ಪಟ್ಟ ಪ್ರಕಾರ ಇರತಕ್ಕನ್ನವು; ಮತ್ತು ಹರಾಜ್ ಕಾಲದಲ್ಲಿ ಪೋದಲ್ಪಡುವವು.

ಯಲ್. ರಿಕ್ಕೆಟ್ಸ್,
ಇನ್‌ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್ ಜಡ್ಜ್‌ರೀಯವರ ಕೋರ್ಟಿನಲ್ಲಿ.

ದಿವಾಳೀಯಾದ ಡಿಕ್ರಿ ದೇಣೇದಾರ ಬೆಂಗಳೂರು ಶಿದ್ದಿಕಟ್ಟೆಯಲ್ಲಿರತಕ್ಕ ಹಿರಾಬೂಬಿನ ವಿಷಯದಲ್ಲಿ—

ಸ್ಯ 1886ನೇ ಇಸವಿ ದಿವಾಳಿ ಕೇಸ್ ನಂಬರು ಮಿ॥ 723.

ಹುಕ್ಕುಂ.

ಮೇಲ್ಕಂಡ ಹಿರಾಬೂಬಿಯು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂಶವ್ಹ ಸಬ್ ಜಡ್ಜ್‌ಯವರಾದ ಮೆ॥ ಸಿ. ಕೈಸ್ ಸಾಹೇಬರವರ ರೂಬರೂ ಅರ್ಜೀದಾರಳಾದ ಹಿರಾಬೂಬಿಯು ಖುದ್ದಾಗಿಯೂ ಮತ್ತು ಸದರೀಯವಳ ಲೇಣೇದಾರ್‌ರಾದ 1—2ನೇರ ತರಫ ಪ್ಲೀಡರ್ ಗಂಗಾಧರೈಯನವರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಹಿರಾಬೂಬಿಯು ಹೊಂದುವದಕ್ಕೆ ಹಕ್ಕುದಾರಳಾಗುವದರ ಮೂಲಕ ದಿವಾಳಿಯಾದವಳೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವಳನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕೋರ್ತರವಾಗಿಯಾಗಲಿ ದಸ್ತಗಿರಿಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವಳನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ಯ 1886ನೇ ಇಸವಿ ಡಿಸಂಬರ್ 6ನೇ ತಾರೀಖಿನಲ್ಲಿ ಈ ಕೋರ್ಟು ವೊಹರು ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಆದ ಪೆಟ್ಟಿ.

ನಂಬರ್.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ರೂ.	ಯಾವಾಗ ಪೈಸೆ ಪೆಂಟುಪಡ್ಡ	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರು ಇದ್ದರೆ.	ಟಿಪ್ಪಣಿ.
1	ಬೆಂಗಳೂರಲ್ಲಿರತಕ್ಕ ಹಯಾತ್‌ಬಿ	82 4 4	..	ಬೆಂಗಳೂರು ಮುನಸಿಫ್ ಕೋರ್ಟು 1886ನೇ ಇಸವಿ ಅರಿಜಿನಲ್ 43ನೇ ನಂ. ಬಾಬತು ಕೋರ್ಟು ಖರ್ಚು ವೊಬಲಗು.	
2	ಮಹಮ್ಮದ್ ಯಾಖೂಬ್ ಬೆಂಗಳೂರು ..				

ಸಿ. ಕೈನ್ಸ್,
ಸಬ್ ಜಡ್ಜ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 12ನೇ ಜನವರೀ 1887.

ಯಿದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಈ ಕೆಳಗೆ ವಿವರಿಸೋಣಾದ 2 ರಿಜಿಸ್ಟ್ರಾದ ತಮಸೂಕುಗಳು 1884ನೇ ಇಸವಿ ಲಾಗಾಯಿತು ಬಾಗೇಪಲ್ಲಿ ಸಬ್ ರಿಜಿಸ್ಟರ್ ಆಫಿಸಿನಲ್ಲಿ ಜೇವಾರಸಾಗಿ ನಿಂತು ಯಿರುತ್ತವೆ. ಸದರೀ ತಮಸೂಕುಗಳನ್ನು ರಿಜಿಸ್ಟರಿಗೆ ಹಾಜರ್‌ಮಾಡಿದವರಾಗಲಿ, ಅದರಲ್ಲಿ ಬಾಧ್ಯತೆವುಳ್ಳವರಾಗಲಿ, ಈ ಲಾಗಾಯಿತು 1 ತಿಂಗಳಲ್ಲಿ ಬಾಗೇಪಲ್ಲಿ ಸಬ್ ರಿಜಿಸ್ಟ್ರಾರ್‌ರಲ್ಲಿ ಹಾಜರಾಗಿ ವಾಜಬಿ ಫೀಜು ಪಾವತಿಯಿಂದ ತಂಸೂಕುಗಳನ್ನು ವಾಪಸ್ ಪಡಿಯಬಹುದು ಇಲ್ಲವಾದರೆ ಇಂಡ್ಯನ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ಅವುಗಳು ನಾಶ ಪಡಿಸಲ್ಪಡುವವು.

ಆಫೀಸಿನ ಹೆಸರು.	ರಿಜಿಸ್ಟರ್ ಬುಕ್ಕಿನ ಮತ್ತು ತಂಸೂಕಿನ ನಂಬರು ಇಸವಿ.	ಕಕ್ಷಿಗಾರ್ರ ಹೆಸರು.		ತಂಸೂಕಿನ ತಾರೀಖು.	ತಂಸೂಕು ರಿಜಿಸ್ಟ್ರಾದ ತಾರೀಖು.	ತಂಸೂಕಿನ ಸ್ವಭಾವ ಮತ್ತು ಕ್ರಮ.
		ತಂಸೂಕುಬರದು ಕೊಟ್ಟವ.	ಬರಸಿಕೊಂಡವ.			
ಬಾಗೇಪಲ್ಲಿ ಸಬ್ ರಿಜಿಸ್ಟರ್ ಆಫೀಸ್.	1ನೇ ಬುಕ್ಕಿನ 1883—84ನೇ ಇಸವಿ ನಂಬರು 27	ಬಾಗೇಪಲ್ಲಿ ತಾಲ್ಲೂಕು ಬೀಳೂರು ಹೋಬಳಿ ರಾಸನ ಪಟೇಲಹೆಬ್ಬಾರರಾಮಪ್ಪನ ಮಗ ಸುಬ್ಬರಾಮಪ್ಪ	ಕಡಪಾಜಿಲ್ಲಾ ಕದಿರಿ ತಾಲ್ಲೂಕು ಈ ತೋಟಿ ಗ್ರಾಮದ ಕೋಮಟಿ ಕರೇರಂಗಪ್ಪನ ಮಗ ಬಾಲಯ್ಯ	1884ನೇ ಇಸವಿ ಫಿಬ್ರವರೀ ತಾರೀಖು 6	1884ನೇ ಇಸವಿ ಫಿಬ್ರವರೀ ತಾರೀಖು 6	ಬಾಗೇಪಲ್ಲಿ ತಾಲ್ಲೂಕು ಸೋವಕಪಲ್ಲಿ ಕೊಂಡೋರುಪಲ್ಲಿ ಈಗ್ರಾಮಗಳ ಬಾಬತು ತರೀ—ಖುಷ್ಕೀ—ಬಾಗಾಯಿತು ಬೀಜವರೀ ೨॥೧೦॥೦॥ ಕಂದಾಯ ೪೮॥÷೬ ವುಳ್ಳ ಜಮೀನುಗಳು 300 ರೂಪಾಯಿಗಳಿಗೆ ಕ್ರಯ ಮಾಡಿರುವದಾಗಿ.
	ಡಿಟೋ ಇಸವಿ ನಂಬರ್ 28	ಡಿಟೋ	ಡಿಟೋ	ಡಿಟೋ	ಡಿಟೋ	ಬಾಗೇಪಲ್ಲಿ ತಾಲ್ಲೂಕು ರಾಶ್ಚರುವು ಮುಸಿಲಿಗಾನಪಲ್ಲಿ ಈ ಗ್ರಾಮಗಳ ಬಳಿ ಯಿರುವ ತರೀ-ಖುಷ್ಕೀ-ಬಾಗಾಯಿತು ಬೀಜವರೀ ೯॥೫-೩॥೦ಗೆ ಕಂದಾಯ 94—3—0 ವುಳ್ಳ ಜಮೀನುಗಳನ್ನ 740 ರೂಪಾಯಿಗೆ ಕ್ರಯಕ್ಕೆ ಅಧಾರಮಾಡಿ ಇರುವದಾಗಿ.

ಸಿ. ಸುಬ್ಬರಾವ್,
ರಿಜಿಸ್ಟ್ರಾರ್.